ತೆರೆದಿಲ್ಲ? ರಾಜ್ಯದ ಬಹುತೇಕ ಜಿಲ್ಲೆಗಳ ಜನರು ಅಲ್ಲಿ ವಾಸಿಸುತ್ತಿದ್ದಾರೆ. ಆದ್ದರಿಂದ ಠಾಣೆ ಮಂಜೂರು ಮಾಡುತ್ತಿರೋ ಎಂದು ಕೇಳುತ್ತಿದ್ದೇನೆ.

ಶ್ರೀ ಆರ್.ರೋಶನ್ ಬೇಗ್:- ಅಧ್ಯಕ್ಷರೇ, ನಾನು ಒಂದು ಭರವಸೆ ಕೊಡುತ್ತೇನೆ, ಅವರ ಜಿಲ್ಲೆಗೆ ನಾನು ಟೂರ್ ಹೋದಾಗ ಅವರನ್ನು ಕರೆದುಕೊಂಡುಹೋಗಿ ಪೋಲಿಸ್ ಠಾಣೆಗಾಗಿ ಕಟ್ಟಡ ಕಟ್ಟಿದ್ದಾರೆಂದು ಅವರು ಹೇಳಿದ್ದಾರೆ ಅದನ್ನು ಖುದ್ದು ನೋಡುತ್ತೇನೆ. ಅಮೇಲೆ ಕರ್ನಾಟಕದಲ್ಲಿ ಪೊಲೀಸ್ ಠಾಣೆಗಳಿರುವುದು 769, About 10-15 years back, the requirement of police Stations as per National Police Commission's recommendation was 1128. ಅಷ್ಟು ಸ್ಟೇಶನ್ಸ್ ಕರ್ನಾಟಕದಲ್ಲಿರಬೇಕು ಅಂತ ಇದೆ, 1990-91ರಲ್ಲಿ ಕರ್ನಾಟಕ ಜನಸಂಖ್ಯೆ 4.48 ಕೋಟಿ ಇದ್ದಾಗ 1275 ಠಾಣೆಗಳಿರಬೇಕಾಗಿತ್ತು, We have only about 768 police stations. We are working out as to how we could have more police stations.

ವಿಷಯ:- ಬೆಂಗಳೂರು ನಗರದಲ್ಲಿ ಒಳಚರಂಡಿ ಕೊಳವೆ ಪೈಪುಗಳನ್ನು ಬದಲಾಯಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 183 (1202)

ಶ್ರೀ ಪಿ.ಎನ್.ಪ್ರಕಾಶ್:- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಹಳೆಯ ನಗರದ ಒಳಚರಂಡಿ ಕೊಳವೆ ಪೈಪುಗಳು ಚಿಕ್ಕಪೈಪುಗಳಾಗಿದ್ದು ಅವುಗಳನ್ನು ಬದಲಾಯಿಸಿ ದೊಡ್ಡ ಪೈಪುಗಳನ್ನು ಹಾಕಲು ಸರ್ಕಾರದವರು ಪರಿಶೀಲಿಸಿರುವರೆ?

ಆ) ಹಾಗಿದ್ದಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):-

ಅ) ಇಲ್ಲ.

ಆ) ಸಾರ್ವಜನಿಕರಿಂದ ಕೊಳಚೆ ನೀರು ಉಕ್ಕಿ ಹರಿಯುವ ಬಗ್ಗೆ ಮತ್ತು ಕೊಳವೆಗಳು ಕಟ್ಟಿ ಕೊಂಡಿರುವ ಬಗ್ಗೆ ದೂರು ಬಂದಲ್ಲಿ ಮಂಡಳಿಯು ಅಂತ ಜಾಗದಲ್ಲಿರುವ ಚಿಕ್ಕ ಕೊಳವೆಗಳನ್ನು ಹೆಚ್ಚುವರಿ ವ್ಯಾಸದ ಕೊಳವೆಗಳಿಂದ ಯೋಜಿತ ಕಾರ್ಯಕ್ರಮದಡಿಯಲ್ಲಿ ಬದಲಾಯಿಸಲಾಗುತ್ತದೆ.

ಶ್ರೀ ಪಿ.ಎನ್.ಪ್ರಕಾಶ್:- ಅಧ್ಯಕ್ಷರೇ ಬೆಂಗಳೂರಿನಲ್ಲಿ ಕಳೆದು 50-60 ವರ್ಷಗಳಿಂದ ಒಳಚರಂಡಿಪೈಪ್‌ಗಳು ಬದಲಾವಣೆ ಮಾಡಬೇಕೆಂದು ಪ್ರಶ್ನೆ ಕೇಳಿದ್ದೆ, ಅವರು ದೂರು

ಬಂದಿರುವ ಕಡೆ ಎಲ್ಲಿ ನೀರು ಉಕ್ಕಿಹರಿಯುತ್ತದೋ ಅಲ್ಲಿ ಮಾತ್ರ ಬದಲಾವಣೆ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಬೆಂಗಳೂರುನಲ್ಲಿ ಬೆಳಿಗ್ಗೆ ಎದ್ದರೆ ಒಳಚರಂಡಿ ಉಕ್ಕಿ ಹರಿಯುತ್ತಿರುತ್ತವೆ. ಅಲ್ಲಿರುವ ಸಿಬ್ಬಂದಿ ಸಾಲದು, ಎಷ್ಟು ಸಲ ಹೇಳಿದರೂ ರಿಪೇರಿ ಮಾಡಿಸುವುದಿಲ್ಲ. ಎಲ್ಲ ಪೈಪ್‌ಗಳು 7 ಅಂಗಲ ಮತ್ತು 18 ಅಂಗಲ ಇದ್ದು, ಪ್ರತಿದಿನ ನೀರು ಹರಿಯುತ್ತಿರುವುದನ್ನು ನೋಡುತ್ತಿದ್ದೇವೆ ಸಚಿವರು ಇದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅನಂತನಾಗ್:- ಅಧ್ಯಕ್ಷರೇ, ಈ ಕುರಿತು ಮೊನ್ನೆ ಕೂಡ ಸ್ವಲ್ಪ ಚರ್ಚೆಯಾಗಿತ್ತು ಚಿಕ್ಕಪೇಟೆ ಬಿನ್ನಿಪೇಟೆ ಚಾಮರಾಜಪೇಟೆ ಕಡೆಗಳಲ್ಲಿ ಒಳಚರಂಡಿ ಪೈಪ್‌ಗಳು ಕಟ್ಟಿಕೊಂಡು ಮಳೆಗಾಲದಲ್ಲಿ ಮೇಲಿಂದಮೇಲೆ ಉಕ್ಕಿ ಹರಿಯುತ್ತವೆ. ಮಳೆನೀರು ಮತ್ತು ಕೊಳವೆನೀರು ಏಕಕಾಲದಲ್ಲಿ ಹೋಗುವ ವ್ಯವಸ್ಥೆ ಇಲ್ಲ. ಆದ್ದರಿಂದಲೇ ಈ ವಿಚಾರ ಸದನದಲ್ಲಿ ಮೊನ್ನೆ ಬಂದಾಗ ನಾನು ಮೆಗಾಸಿಟಿ ಬಗ್ಗೆ ಮಾತನಾಡಿದೆ. ಆದರೆ ಮಾನ್ಯ ಸದಸ್ಯರು ಪ್ರಶ್ನೆ ಎತ್ತಿರುವುದಕ್ಕೊಸ್ಕರವೇ ಈ ವರ್ಷದಲ್ಲಿ 170 ಲಕ್ಷ ರೂಗಳನ್ನು ಮಿಾಸಲಾಗಿಟ್ಟಿದೆ, ಎಲ್ಲೆಲ್ಲಿ ದೂರು ಬರುತ್ತಿದ್ದವು ಅವನ್ನು ತಕ್ಷಣ ಅಟೆಂಡ್ ಮಾಡಿ ಸಮಸ್ಯೆ ಬಗೆಹರಿಸಲಾಗುತ್ತಿತ್ತು ಆದರೂ ಸದಸ್ಯರು ಇವತ್ತು ಕೇಳಿರುವುದರಿಂದ ತಕ್ಷಣ ಇದನ್ನು ಅಟೆಂಡ್ ಮಾಡಿಸಿ ಮಳೆ ಇಲ್ಲದೆ ಇದ್ದರೂ ಉಕ್ಕಿಹರಿಯುವ ಸ್ಥಿತಿ ಇದ್ದರೆ, ಪರಿಶೀಲನೆ ಮಾಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆ.

ಶ್ರೀ ಪಿ.ಎನ್.ಪ್ರಕಾಶ್:- ಪ್ರತಿ ದಿವಸ ಅಲ್ಲಿನ ನಾಗರೀಕರು ನಮಗೆ ಶಾಪ ಹಾಕುತ್ತಿದ್ದಾರೆ. ಅಲ್ಲಿ ಸೂಕ್ತ ಸಿಬ್ಬಂದಿ ಇಲ್ಲ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಅವರನ್ನು ನಾವು ಕೇಳಿದರೆ ನಮ್ಮ ಹತ್ತಿರ ಸಿಬ್ಬಂದಿ ಇಲ್ಲ 12 ಜನರು ಇದ್ದಾರೆ ನಮಗೆ 30 ಜನರು ಬೇಕಾಗುತ್ತದೆಂದು ಹೇಳುತ್ತಾರೆ.

ಶ್ರೀ ಎನ್.ರಾಜಣ್ಣ:- ಭಾರತಿನಗರ, ಶಿವಾಜಿನಗರ ಚಿಕ್ಕಪೇಟೆ, ಗಾಂಧೀನಗರ, ಶಾಂತಿ ನಗರ ಚಾಮರಾಜಪೇಟೆ, ಬಸವನಗುಡಿ ಮುಂತಾದ ಹಳೇ ಕ್ಷೇತ್ರದಲ್ಲಿ ಇಂತಹ ಸಮಸ್ಯೆ ಜಾಸ್ತಿಯಾಗಿದೆ. ಅಲ್ಲಿ ಒಳಚರಂಡಿ ವ್ಯವಸ್ಥೆ ಸರಿ ಇಲ್ಲದೇ ಇರುವುದರಿಂದ ಮಳೆ ಬಂದಾಗ ಡ್ರೈನೇಜ್ ಒಳಗೆ ಹರಿಯುವುದಿಲ್ಲ, ಮೇಲೆ ಹರಿಯುತ್ತದೆ. ಜನಸಂಖ್ಯೆ ಒತ್ತಡದಿಂದ ಈ ರೀತಿಯಾಗಿದೆ. ಕಾವೇರಿ 3ನೇ ಹಂತ ನಗರಕ್ಕೆ ಬರುತ್ತಿದೆ. ಆದ್ದರಿಂದ ಎಲ್ಲಾ ಹಳೆಯ ಪೈಪುಗಳನ್ನು ರೀಪ್ಲೇಸ್ ಮಾಡುವುದಕ್ಕೆ ತಮ್ಮಲ್ಲಿ ಏನಾದರೂ ಯೋಜನೆ ಇದೆಯೇ? ಯಾರನ್ನಾದರೂ ಅಪಾಯಿಂಟ್ ಮಾಡಿ ಈ ಹಳೆ ನಗರಗಳಲ್ಲಿ ಇರತಕ್ಕಂತಹ ಪೈಪುಗಳನ್ನು ವೈಜ್ಞಾನಿಕ ಮೆತೆಡ್‌ನಲ್ಲಿ ರೀಪ್ಲೇಸ್ ಮಾಡಬೇಕು. ನ್ಯಾರೋ ರೋಡ್ಸ್ ಇರುವುದರಿಂದ ಅಲ್ಲೇ ಡ್ರೈನೇಜ್ ಪೈಪು ಹೋಗಬೇಕು ಅಲ್ಲೇ ಕೊಳಾಯಿ ನೀರಿನ ಪೈಪು ಹೋಗಬೇಕು ಅಲ್ಲೇ ಅಂಡರ್‌ಗ್ರೌಂಡ್ ಕೇಬಲ್ಸ್ ಹೋಗಬೇಕು ಅಲ್ಲೇ ಪಿ ಅಂಡ್ ಟಿ ಕೇಬಲ್ಸ್ ಹೋಗಬೇಕು. ಇದರಿಂದಾಗಿ ಅಲ್ಲಿ ಜಾಗ ಇಲ್ಲದೇ

ಇರುವುದರಿಂದ ಬಹಳ ದುರವಸ್ಥೆಯಾಗಿದೆ. ನಮಗೆ ಹೇಳಿಕೊಳ್ಳುವುದಕ್ಕೆ ಬಹಳ ನೋವಾಗುತ್ತದೆ.

ಶ್ರೀ ಅನಂತನಾಗ್:- ಮಾನ್ಯ ಅಧ್ಯಕ್ಷರೇ ಇದಕ್ಕೆ ಒಂದೇ ಒಂದು ಉತ್ತರವಿದೆ. ಎಲ್ಲೆಲ್ಲಿ ಪೈಪುಗಳು ಹಳೆಯದಾಗಿವೆ ಅಲ್ಲಿ ಅಗಲವಾದ ಪೈಪುಗಳನ್ನು ಹಾಕಬೇಕು. ಇದಕ್ಕೆ 370 ಲಕ್ಷ ಹಣವನ್ನು ಮೀಸಲಾಗಿಟ್ಟಿದ್ದೇವೆ. ತಕ್ಷಣ ಪರಿಶೀಲನೆ ಮಾಡಿ ಎಲ್ಲೆಲ್ಲಿ ಬದಲಾಯಿಸುವುದಕ್ಕೆ ಸಾಧ್ಯ ಅದನ್ನು ಮಾಡುತ್ತೇನೆನ್ನುವ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಕೊಡುತ್ತೇನೆ.

ಶ್ರೀ ಪಿ.ಎಸ್.ಪ್ರಕಾಶ್:- ಸಂಗಂ ಥಿಯೇಟರ್ ರೋಡ್‌ಗೆ 1994ರಲ್ಲಿ 8 ಲಕ್ಷ ರೂಪಾಯಿಯ ಪೈಪ್ಸ್‌ಗಳನ್ನು ಮಂಜೂರು ಮಾಡಿದ್ದರು. ಅದನ್ನು ಇವತ್ತಿನವರೆಗೂ ಹಾಕಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಯಾಗಿ ಕೇಳಿದಾಗ ಪೋಲೀಸ್ ಟ್ರಾಫಿಕ್‌ನವರು ನಮಗೆ ಅನುಮತಿ ಕೊಟ್ಟಿಲ್ಲ ಅವರು ಅನುಮತಿ ಕೊಡುವವರೆಗೂ ನಾವು ಈ ಪೈಪ್ಸ್‌ಗಳನ್ನು ಹಾಕುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಬಿ.ಡಬ್ಲ್ಯು.ಎಸ್.ಎಸ್.ಬಿ.ಯವರಿಗೂ ಪೋಲೀಸ್ ಟ್ರಾಫಿಕ್‌ನವರಿಗೂ ಸರಿಯಾದ ಹೊಂದಾಣಿಕೆ ಇಲ್ಲ. ಇವರು ಆರ್ಡರ್ ಮಾಡಿದರೂ ಎರಡು ವರ್ಷವಾದರೂ ಕೆಲಸಗಳು ಆಗುತ್ತಿಲ್ಲ ಅದರ ಬಗ್ಗೆ ಮಾನ್ಯ ಸಚಿವರ ಉತ್ತರ ಕೊಡಬೇಕು.

ಶ್ರೀ ಅನಂತನಾಗ್:- ಪ್ರಾಪರ್ ಕೋ ಆರ್ಡಿನೇಷನ್‌ಗೆ we will ensure, Sir.

ಅಧ್ಯಕ್ಷರು:- ಮಾನ್ಯ ಪ್ರಕಾಶ್ ಹುಕ್ಕೇರಿಯವರ ಪ್ರಶ್ನೆಯನ್ನು ತಡೆ ಹಿಡಿದಿದ್ದೇನೆ. ಅವರು ಬೆಳಗಾಂನಲ್ಲಿದ್ದಾರೆ ಅಲ್ಲಿಂದ ಬರುವುದಕ್ಕಾಗಿಲ್ಲ ಅವರು ಅನುಮತಿ ಕೇಳಿದ್ದಾರೆ. ಮುಂದೆ ನಿಮ್ಮ ಪ್ರಶ್ನೆ ಇದ್ದ ದಿವಸ ತೆಗೆದುಕೊಳ್ಳೋಣ.

ವಿಷಯ:- ಪೋಲೀಸ್ ಸಿಬ್ಬಂದಿಗಾಗಿ ವಸತಿಗೃಹ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: (1392)

ಶ್ರೀ ಜಗದೀಶ್ (ಹುಬ್ಬಳ್ಳಿ-ಗ್ರಾಮೀಣ):- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾ ನಗರದಲ್ಲಿ ಪೋಲೀಸ್ ಸಿಬ್ಬಂದಿಗಳಿಗಾಗಿ ನಿರ್ಮಿಸಲಾದ ವಸತಿಗಳೆಷ್ಟು ಹಾಗೂ ವಸತಿ ಬಡಾವಣೆಗಳೆಷ್ಟು?

ಆ) ಈಗಿರುವ ವಸತಿ ಗೃಹಗಳು ಹಾಗೂ ವಸತಿ ಬಡಾವಣೆಗಳು ಪೊಲೀಸ್ ಸಿಬ್ಬಂದಿಗೆ ಸಾಕಾಗುವುದೇ?